Approved by the Department of Public Instruction

ಕರ್ನಾಟಕ ಸ್ಕೌಟ್ ಮತ್ತು ಗೈಡ್

The Karnataka Scout and Guide

Vol. 70 **November 1987** **No. 8**



Sardar Lakshman Sing, National Commissioner, Bharat Scouts and Guides, India receiving the "PEACE MESSENGER" Award at United Nations Office on 15th September 1987.

PUBLISHED BY

The Bharat Scouts & Guides, Karnataka State

Kondajji Basappa Road, Prof. P. Sivashankar Circle, Fort, Bangalore-560 002

Annual Subscription Rs. 10/- only

ಈ ಸಂಚಿಕೆಯಲ್ಲಿ

ಕರ್ನಾಟಕ ಸ್ಕೌಟ್ ಮತ್ತು ಗೈಡ್

ಸಂಪುಟ ೭೦ | ನವೆಂಬರ್, ೧೯೮೭ | ಸಂಚಿಕೆ ೮

ತನು-ಮನ-ಧನ ಅರ್ಪಣೆ

ದೇಶ, ಧರ್ಮ, ಸಮಾಜ — ಇವುಗಳ ಸೇವೆಗೆ ಸಂಬಂಧಿಸಿದಂತೆ ನಿಮ್ಮ ತನು–ಮನ–ಧನಗಳನ್ನರ್ಪಿಸಿ ಎಂದು ಕರೆ ಕೊಡುವುದು, ಇಂತಹ ಕಾರ್ಯಕ್ಕೆ ಇಂತವರು ತನು ಮನ ಧನಗಳನ್ನರ್ಪಿಸಿದ್ದಾರೆ ಎಂದು ಹೊಗಳುವುದು ಮತ್ತು ಈ ಕೆಲಸಕ್ಕೆ ನನ್ನ ತನು ಮನ ಧನಗಳನ್ನು ಅರ್ಪಿಸಿದ್ದೇನೆ ಎಂದು ಹೇಳಿಕೊಳ್ಳುವುದನ್ನು ನಾವು ಸಾಮಾನ್ಯವಾಗಿ ಕೇಳುತ್ತೇವೆ. ಈ ಮಾತುಗಳನ್ನು ಬಳಸುವವರಿಗೆ ಅನೇಕ ಸಲ ಆ ತನು ಮನ ಧನ ಶಬ್ದಗಳ ಅರ್ಥ, ಉದ್ದೇಶ, ಇತಿಮಿತಿ – ಇವುಗಳ ಕಲ್ಪನೆಯೇ ಇರುವುದಿಲ್ಲವೆಂದು ಹೇಳಬಹುದು.

ಸಂದರ್ಭ ಬಂತೆಂದರೆ ಸಾಕು, ತೀರ ಸರಳವಾಗಿ, ತೀರ ಸಹಜವೆಂಬಂತೆ ಈ ಮಾತುಗಳನ್ನು ಬಳಸುವುದುಂಟು. ಆದರೆ ಯಾವುದೇ ಒಂದು ಉದಾತ್ತ ಉದ್ದೇಶಕ್ಕೆ ಅರ್ಪಿಸಬೇಕಾದ ತನು ಮನ ಮತ್ತು ಧನ ಹೇಗಿರಬೇಕು ? ಅರ್ಪಿಸುವ ಬಗೆ ಹೇಗೆ ? ಅರ್ಪಿಸುವ ಮುನ್ನ, ಅರ್ಪಿಸಿದ ನಂತರದ ಸ್ಥಿತಿ ಏನು ಎಂಬ ಬಗ್ಗೆ ವಿಚಾರಮಾಡುವುದು ಕಡಮೆ. ಈ ಮಾತುಗಳನ್ನು ಹೇಳಿ ಕೇಳುವವರು ಭಾವಜೀವಿಗಳಾಗಿದ್ದರಂತೂ ಅವರಿಗೆ ಅವುಗಳ ಬಳಕೆ ಬಲು ಹಿತವೆನಿಸುತ್ತದೆ. ಆದರೆ ಕೃತಿಯ ಗತಿ ?

ತನು ಮನ ಧನಗಳ ಅರ್ಪಣೆಗೆ ದರ್ಪಣ ಹಿಡಿದಿರುವ ಶರಣ ಹಡಪದಪ್ಪಣ್ಣನ ಒಂದು ವಚನ ಹೀಗಿದೆ :

"ತನುವ ಕೊಟ್ಟು ಭಕ್ತರಾದೆವೆಂಬರು, ಮನವ ಕೊಟ್ಟು
ಭಕ್ತರಾದೆವೆಂಬರು ಧನವಕೊಟ್ಟು ಭಕ್ತರಾದೆವೆಂಬರು
ತನು ಮನ ಧನವೆಂತು ಕೊಟ್ಟರಿ ಹೇಳಿರಣ್ಣಾ ?
ನಿಮ್ಮ ಒಡವೆ ನಿಮ್ಮಲ್ಲೇ ಇದೆ, ಅದು ಹೇಗೆಂದರೆ,
ಬಲ್ಲವರು ನೀವು ಕೇಳಿ
ತನುವ ನೀವು ಕೊಟ್ಟರೆ ನೀವು ರೂಪಾಗಿ ಇರುವುದಕ್ಕೇನು?
ಮನವ ನೀವು ಕೊಟ್ಟರೆ ನಿಮಗೆ ನಡೆ ನುಡಿ ಚೈತನ್ಯವೇನು?
ಧನವ ನೀವು ಕೊಟ್ಟರೆ ಕ್ಷುತ್ತಿಗೆ ಭಿಕ್ಷ ಸೀತಕ್ಕೆ ರಗಟೆ ಏನು?
ಅಂತಲ್ಲ ಕೇಳಿರಣ್ಣಾ—
ತನುವ ಕೊಟ್ಟುದಾವುದೆಂದರೆ : ಹುಸಿ ಹೋದರೆ
ಉಟ್ಟೇನು ತೊಟ್ಟೇನೆಂಬ ಗುಣವಳಿದರೆ ತನುವೆ
ಗುರುವಾಯಿತ್ತು.
ಮನವ ಕೊಟ್ಟುದಾವುದೆಂದರೆ : ವ್ಯಾಕುಳವೆಲ್ಲ ಅಳಿದು
ನಿರಾಕುಳವಾಗಿ ನಿಂದರೆ ಮನವೆ ಲಿಂಗವಾಯಿತ್ತು.
ಧನವ ಕೊಟ್ಟರೇನೆಂಬುದಾವುದೆಂದರೆ : ಇಂದಿಗೆ ನಾಳಿಗೆ
ಎಂಬ ಸಂದೇಹ ಭಾವಕ್ಕೆ ಭಯಕ್ಕೆ ಭವವಳಿದುದೇ
ಜಂಗಮವಾಯಿತ್ತು.
ಇಂತಿದೀಗ ನಮ್ಮ ಮುನ್ನಿನ ಆದ್ಯರ ನಡೆನುಡಿ, ಮಾಟ
ಕೂಟ, ಇದನರಿಯದೆ ಏನೊಂದು ಮಾಡಿದರೂ, ನೀಡಿ
ದರೂ, ಕೊಟ್ಟರೂ, ಕೊಂಡರೆಯೂ, ವಾಯಕ್ಕೆ ವಾಯ
ಬಸವಪ್ರಿಯ ಕೂಡಲ ಚನ್ನಬಸವಣ್ಣಾ"

ಇದು ತನು ಮನ ಧನಗಳ ಅರ್ಥ, ಆಶಯ, ಆಯ ಮತ್ತು ಅರ್ಪಣಾ ವಿಧಾನ. ಅವುಗಳ ವಾಸನೆ ಹರಿದು ಪರಿಶುದ್ಧವಾಗದಿದ್ದರೆ ಆ ಭಕ್ತಿ ಭಿನ್ನ ಭಕ್ತಿಯಾಗುತ್ತದೆ. ಡಂಭಾಚಾರವಾಗುತ್ತದೆ.

ತನು ಮನ ಧನಗಳು ವಾಣಿಜ್ಯೋದ್ದೇಶಕ್ಕೆ ಹೂಡುವ ಬಂಡವಾಳದಂತ ವಸ್ತುಗಳಲ್ಲ. ಸದುದ್ದೇಶಕ್ಕಾಗಿ ಸದ್ವಿನಿಯೋಗ ಮಾಡಬೇಕಾದ ಸಾಧನಗಳು. ಈ ವಿನಿಯೋಗ ಒಂದು ಕೊಟ್ಟು ಎರಡು ಪಡೆಯುವ ಬಡ್ಡಿಕಾರನ ವ್ಯವ

ಹಾರವಲ್ಲ ; ಎಲ್ಲವನ್ನೂ ಕೊಟ್ಟು ಏನನ್ನೂ ಪಡೆಯದ ಸಹಜ ಸದ್ಭಕ್ತಿಯ ಸಮರ್ಪಣೆ !

ತನುವನ್ನು ಅರ್ಪಿಸಿದೆವೆಂದರೆ ಆ ತನುವಿನ ಅಭಿಮಾನ ಅಳಿದಿರಬೇಕು. ಮನವನ್ನು ಅರ್ಪಿಸಿದೆವೆಂದರೆ ಆ ಮನದಲ್ಲಿ ಆತಂಕಕ್ಕೆ ಅವಕಾಶವಿರಬಾರದು. ಧನವನ್ನು ಅರ್ಪಿಸಿದೆವೆಂದರೆ ಆ ಧನದ ಆಸೆ ಅಳಿದಿರಬೇಕು. ಅಲ್ಲಿ ಉಟ್ಟು ತೊಡುವ ಕೊಟ್ಟು ಕುದಿವ ಭಾವಕ್ಕೆ ಎಳ್ಳಷ್ಟು ಎಡೆಯಿರಬಾರದು. ಇಂದು–ನಾಳಿನ ಸಂದೇಹವಿರಬಾರದು. ಆಗ ತನುವೇ ಗುರುವಾಗುತ್ತದೆ; ಮನವೇ ಲಿಂಗವಾಗುತ್ತದೆ ; ಧನವೇ ಜಂಗಮವಾಗುತ್ತದೆ. ಇದಕ್ಕೆ ಹೊರತಾಗಿ ತನು–ಮನ–ಧನಗಳನ್ನು ಅರ್ಪಿಸಿದೆವೆಂದರೆ ಅದು ಹಡಪದಪ್ಪಣ್ಣ ಹೇಳುವಂತೆ ವಾಯಕ್ಕೆ ವಾಯ ; ಅಂದರೆ ಕೇವಲ ಕಪಟ.

ತನು ಮನ ಧನಗಳ ಅಸ್ತಿತ್ವ, ಅರ್ಥ ಮತ್ತು ಆಶಯಗಳನ್ನು ಅರಿತು ಅವುಗಳನ್ನು ವಿನಿಯೋಗಿಸುವುದು ನಿಜವಾದ ಧರ್ಮ ; ನಿಜವಾದ ಅರ್ಪಣೆ. ಅಂತಹ ಅರ್ಪಣೆಯಿಂದ ನಮ್ಮ ಸರ್ವಕ್ರಿಯೆಗಳು ಶುದ್ಧವಾಗುತ್ತವೆ. ಹೆಚ್ಚೇನು ನಮ್ಮ ಕಾಯವೇ ಕೈಲಾಸವಾಗುತ್ತದೆ !

ಅರ್ಪಣೆ ಮಾಡುವವನ ತನುವೊಂದು ಕಡೆ, ಮನವೊಂದು ಕಡೆ, ಧನವೊಂದು ಕಡೆ ಇದ್ದರೆ ಅದು ಅರ್ಪಣೆಯೇ ಅಲ್ಲ. ಹಾಲಿಗೆ ಹಾಲು ಬೆರೆತಂತೆ, ನೀರಿಗೆ ನೀರು ಬೆರೆತಂತೆ ಅವೆಲ್ಲ ಒಗ್ಗೂಡಿ ಸೇವೆಗೆ ಸಲ್ಲಬೇಕು ಆಗಲೇ ಅದು ಸಾರ್ಥಕ ಅರ್ಪಣೆಯಾಗುವುದು. ಇಲ್ಲವಾದರೆ ಅದು ವ್ಯರ್ಥ ಘೋಷಣೆಯಾಗುತ್ತದೆ.

ತನು ಮನ ಧನಗಳು ಎಲ್ಲೆಂದರಲ್ಲಿ ಚೆಲ್ಲಿ ಬಿಸುಟುವ ಕಸ ಕಡ್ಡಿಗಳಂತಲ್ಲ–ಅವಕ್ಕೆ ಪಾವಿತ್ರ್ಯತೆ ಇದೆ ; ಘನತೆ ಗೌರವಗಳಿವೆ. ಅವನ್ನು ಬಳಸುವಾಗ ತುಂಬ ಎಚ್ಚರವಿರಬೇಕು. ಎಚ್ಚರ ತಪ್ಪಿದರೆ ತನು ರೋಗದ ಆಗರವಾಗಬಹುದು ; ಮನ ಮರ್ಕಟದ ಮನೆಯಾಗಬಹುದು ; ಧನ ತೂತು ಬಿದ್ದ ದೋಣಿಯಾಗಬಹುದು. ಆದ್ದರಿಂದ ಅರಿತು ಆಚರಿಸಬೇಕು. ಅದಕ್ಕೆ ಮಿಗಿಲಾದ ಯೋಗವಿಲ್ಲ. ಆಗ ದೊರೆಯುವ ಶಾಂತಿಗಿಂತ ಮಿಗಿಲಾದ ಶಾಂತಿ ಮತ್ತೊಂದಿಲ್ಲ.

ತನು ಮನ ಧನಗಳ ಅರ್ಪಣೆ ಹೇಗಿರಬೇಕೆಂಬುದಕ್ಕೆ ನಾವು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟ ಕಾಲದ ಜನರನ್ನು ನೆನೆಯಬೇಕು. ಆಗ ಅವರಿಗಿದ್ದ ಒಂದೇ ದೃಷ್ಟಿ ಸ್ವಾತಂತ್ರ್ಯ. ಅವರ ನರನಾಡಿಗಳೆಲ್ಲ ಸ್ವಾತಂತ್ರ್ಯದ ನುಡಿಯನ್ನೇ ಮಿಡಿಯುತ್ತಿದ್ದವು. ಅವರಿಗೆ ಮುಖ್ಯವಾಗಿದ್ದುದು ಮುಟ್ಟಬೇಕಾದ ಗುರಿ. ಉಳಿದುದೆಲ್ಲ ಗೌಣ. ಅದು ಸರ್ವಾರ್ಪಣೆಯ ಸಮರ್ಥ ಆಚರಣೆ !

—ಗೊ. ರು. ಚನ್ನಬಸಪ್ಪ

ನೀರ ಕಂಡಲ್ಲಿ ಮುಳುಗುವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವನೊಣಗುವ ಮರವ
ಮೆಚ್ಚಿದವರು ನಿಮ್ಮನೆತ್ತ ಬಲ್ಲರು
ಕೂಡಲ ಸಂಗಮದೇವ

—ಬಸವಣ್ಣ

ಧಾರವಾಡದಲ್ಲಿ ನಾಯಕತ್ವ ತರಬೇತಿ ಶಿಬಿರ

ಧಾರವಾಡ ಜಿಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಆಶ್ರಯದಲ್ಲಿ ನವೆಂಬರ್ ೫ ರಿಂದ ೧೧ ರವರೆಗೆ ಮಕ್ಕಳ ನಾಯಕತ್ವ ತರಬೇತಿ ಶಿಬಿರವು ನಡೆದು ಜಿಲ್ಲೆಯ ವಿವಿಧ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಂದ ೧೫೦ ಮಕ್ಕಳು ಭಾಗವಹಿಸಿದ್ದರು.

ಉದ್ಘಾಟನೆ

ದಿ. ೫ ರಂದು ಸಂಜೆ ನಡೆದ ಉದ್ಘಾಟನಾ ಸಮಾರಂಭಕ್ಕೆ ಖ್ಯಾತ ವೈದ್ಯ ಮತ್ತು ಅಂಜುಮನ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ|| ಎ. ಎಂ. ಜಮಾದಾರ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಸ್ಕೌಟ್ ಗೈಡ್ ಶಿಕ್ಷಣವು ಸಾರ್ವಜನಿಕ ಶಿಕ್ಷಣದ ಒಂದು ಮಹತ್ವದ ಅಂಗವಾಗಿದ್ದು, ಇದರಲ್ಲಿರುವ ತತ್ವಗಳು ಪ್ರತಿಯೊಬ್ಬ ಮಗುವಿನ ಅಂತರಾಳವನ್ನು ಮುಟ್ಟಿ, ಸಮಾಜದಲ್ಲಿ ಅವನೊಬ್ಬ ಯೋಗ್ಯ ವ್ಯಕ್ತಿಯಾಗಿರಲು ಅವಕಾಶ ಕೊಡುತ್ತದೆ ಎಂದ ಅವರು ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಸ್ಕೌಟ್ ಗೈಡ್ ಶಿಕ್ಷಣ ಕ್ರಮವನ್ನು ಅಳವಡಿಸಿಕೊಂಡರೆ ನಿಜವಾಗಿಯೂ ಮಕ್ಕಳ ಸೇವೆ ಮತ್ತು ಸಮಾಜ ಸೇವೆ ಮಾಡಿದಂತಾಗುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾ ಇಲಾಖೆಯ ಉಪ ನಿರ್ದೇಶಕ ಶ್ರೀ ಕೆ. ಎಸ್. ರಾಘವೇಂದ್ರಾಚಾರ್ ಅವರು ಈ ಸಂಸ್ಥೆಯು ಜಿಲ್ಲೆಯಲ್ಲಿ ನಿಜವಾಗಿಯೂ ಮಕ್ಕಳ ಸರ್ವಾಂಗೀಣ ವಿಕಾಸ ಮಾಡಲು ಪ್ರಯತ್ನಿಸುತ್ತಿದ್ದು ಇಲ್ಲಿನ ಶಿಕ್ಷಕರು ನಿಸ್ವಾರ್ಥ ಸೇವೆ ಮಾಡಿದುದರ ಪ್ರತಿಫಲವಾಗಿ ಇಷ್ಟು ಅಭಿವೃದ್ಧಿ ಹೊಂದಿ ಶಿಕ್ಷಣ ಸೇವೆ ಮಾಡುತ್ತಿದೆ ಎಂದರು.

ಒಂದು ವಾರದವರೆಗೆ ಈ ಶಿಬಿರದಲ್ಲಿ ಮಕ್ಕಳಿಗೆ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳ ಮೂಲಕ ತಿಳುವಳಿಕೆ ನೀಡಿ, ಧೈರ್ಯ ಸಾಹಸದ ಚಟುವಟಿಕೆಗಳನ್ನು ಕಲಿಸಲಾಯಿತು.

ಮುಕ್ತಾಯ

ದಿ. ೧೦ ರಂದು ಸಂಜೆ ನಡೆದ ಮುಕ್ತಾಯ ಸಮಾರಂಭಕ್ಕೆ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿ ಶ್ರೀ ಸುಧೀರ್ ಕೃಷ್ಣ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಮೊದಲು ಎಲ್ಲಾ ದಳಗಳ ವೀಕ್ಷಣೆ ಮಾಡಿದರು.

ಶಿಬಿರದಲ್ಲಿ ಭಾಗವಹಿಸಿದ್ದ ಮಕ್ಕಳ ಪರವಾಗಿ ಕಿರಿಯರಾದ ಕುಬೇರ, ಜ್ಯೋತಿ ಕಾಮತ್, ಶೈಲಜಾ ಬಳ್ಳಟಗಿ ಮತ್ತು ರೂಪಾ ಅವರುಗಳು ತಮ್ಮ ಅನುಭವಗಳನ್ನು ವಿವರಿಸಿದರು.

ಚೈತನ್ಯದ ಶಿಕ್ಷಣ

ಮುಖ್ಯ ಅತಿಥಿ ಶ್ರೀ ಸುಧೀರ್ ಕೃಷ್ಣ ಅವರು ಜಿಲ್ಲೆಯ ಅನೇಕ ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಶಿಕ್ಷಣ ಕೊಡುತ್ತಿದ್ದರೂ, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಅಂಥ ಎಷ್ಟೋ ಶಾಲೆಯ ಮಕ್ಕಳನ್ನು ಬರಮಾಡಿಕೊಂಡು, ಅವರ ಅಭಿರುಚಿ-ಆಸಕ್ತಿಗೆ ತಕ್ಕಂತಹ ಚೈತನ್ಯದಾಯಕವಾದ ಮತ್ತು ಪ್ರತಿಯೊಬ್ಬರ ಹೃದಯಕ್ಕೆ ಮುಟ್ಟುವ ಶಿಕ್ಷಣವನ್ನು ನೀಡುವುದು ನಿಜವಾಗಿಯೂ ಒಂದು ಹೆಮ್ಮೆಯ ವಿಷಯ, ಪಾಲಕರೆಲ್ಲಾ ಈ ಮಹಾನ್ ಸಂಸ್ಥೆಯ ಶಿಕ್ಷಣದ ಲಾಭವನ್ನು ತಮ್ಮ ಮಕ್ಕಳಿಗೆ ಸಿಗುವಂತೆ ಸಹಕರಿಸಬೇಕು ಎಂದ ಅವರು ಜಿಲ್ಲೆಯಲ್ಲಿ ಸ್ಕೌಟ್ ಗೈಡ್ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡುತ್ತೇನೆಂದು ಭರವಸೆ ನೀಡಿದರು.

ಮಾದರಿ ಸಂಸ್ಥೆ

ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಎಸ್. ದೇಶಪಾಂಡೆಯವರು ಮಾತನಾಡಿ ಜಿಲ್ಲಾ ಸಂಸ್ಥೆಯನ್ನು ಬೆಳೆಸಿ ದೇಶದಲ್ಲೇ ಒಂದು ಮಾದರಿ ಸಂಸ್ಥೆಯಾಗಿಸಿರುವ ಶ್ರೇಯಸ್ಸು ಸಂಸ್ಥೆಯ ನೇತಾರರಿಗೆ ಸಲ್ಲುತ್ತದೆ ಎಂದು ಹೇಳಿ ಇಂಥ ಸಂಸ್ಥೆಯ ಸದುಪಯೋಗವನ್ನು ಜಿಲ್ಲೆಯ ಎಲ್ಲಾ ನಾಗರಿಕರೂ ಮಾಡಿಕೊಳ್ಳಲೆಂದು ಹೇಳಿದರು.

ಶಿಬಿರಾಗ್ನಿ

ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಮಕ್ಕಳು ಅನೇಕ ಸಾಂಸ್ಕೃತಿಕ ಚಟುವಟಿಕೆಗಳನು ಪ್ರದರ್ಶಿಸಿದರು.

ಸರ್ವಧರ್ಮ ಪ್ರಾರ್ಥನೆ

ದಿ. ೧೧ ರಂದು ಬೆಳಿಗ್ಗೆ ೭-೩೦ಕ್ಕೆ ನಡೆದ ಸರ್ವಧರ್ಮ ಸಮನ್ವಯ ಪಾರ್ಥನೆಯಲ್ಲಿ ಮಕ್ಕಳು ಎಲ್ಲಾ ಧರ್ಮಗಳ ಪ್ರಾರ್ಥನೆಗಳನ್ನು ಹಾಡಿದರು. ನಗರದ ಹಿರಿಯ ಸಾಮಾಜಿಕ ಕಾರ್ಯಕರ್ತ ಶ್ರೀ ಆರ್. ಬಿ. ಜಾಧವ ಅವರು ಮಕ್ಕಳ ಜೊತೆ ಮಾತನಾಡಿ, ಮಕ್ಕಳು ಹಾಡಿದ ವಿವಿಧ ಧರ್ಮಗಳ ಪ್ರಾರ್ಥನೆಗಳು ಯಾರನ್ನಾದರೂ ಮುಗ್ಧಗೊಳಿಸುತ್ತವೆ, ಇಡೀ ಜಗತ್ತಿನ ಮಕ್ಕಳಿಗೇ ಉತ್ತಮ ಶಿಕ್ಷಣ ನೀಡುತ್ತಿರುವ ಈ ಸಂಸ್ಥೆಗೆ ಜಾಗತಿಕ ಶಾಂತಿ ಪಾರಿತೋಷಕ ಸಿಕ್ಕಿರುವುದು ಸ್ತುತ್ಯವಾದುದು ಎಂದು ಹೇಳಿ, ಈ ಸಂಸ್ಥೆಯಿಂದ ರಾಷ್ಟ್ರೀಯ ಶಾಂತಿ ಮತ್ತು ಏಕತೆ ಸಾಧ್ಯವಿದೆ ಎಂದು ಹೇಳಿದರು.

ಸ್ಕೌಟರ್, ಗೈಡರ್‌ಗಳ ತರಬೇತಿ ಶಿಬಿರ

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಮಾರ್ಥೊಮಾ ಮಿಷನ್ ಸೆಂಟರ್‌ನಲ್ಲಿ ಅಲ್ಲಿನ ಸ್ಥಳೀಯ ಸಂಸ್ಥೆಯ ಆಶ್ರಯದಲ್ಲಿ ೧೨ ದಿನಗಳ ಸ್ಕೌಟರ್ ಮತ್ತು ಗೈಡ್ ಕ್ಯಾಪ್ಟನ್ ಅವರುಗಳ ತರಬೇತಿ ಶಿಬಿರವು ೧೯೮೭ರ ಸೆಪ್ಟೆಂಬರ್ ೧೮ ರಿಂದ ೨೯ ರವರೆಗೆ ಯಶಸ್ವಿಯಾಗಿ ನಡೆಯಿತು.

ಹೊನ್ನಾವರದಲ್ಲಿ ವನ ಮಹೋತ್ಸವ

ಹೊನ್ನಾವರದ ಸೈಂಟ್ ಥಾಮಸ್ ಪ್ರೌಢಶಾಲೆಯ ಆವರಣದಲ್ಲಿ ಆ ಶಾಲೆಯ ಸ್ಕೌಟ್ ಮತ್ತು ಗೈಡ್ ಮಕ್ಕಳು ತೆಂಗಿನ ಸಸಿಗಳನ್ನು ನೆಟ್ಟು ವನಮಹೋತ್ಸವವನ್ನು ಅ. ೨ ರಂದು ನಡೆಸಿದರು.

೧೧೮ ನೆಯ ಗಾಂಧಿ ಜಯಂತಿಯ ಅಂಗವಾಗಿ ನಡೆದ ಈ ಕಾರ್ಯಕ್ರಮ ವೈಶಿಷ್ಟ್ಯ ಪೂರ್ಣವಾಗಿದ್ದು, ಕೊನೆಯಲ್ಲಿ ಮಕ್ಕಳಿಗೆ ಸಿಹಿ ಹಂಚಲಾಯಿತು.

ಮಾನ್ವಿಯಲ್ಲಿ ಸಸಿ ನೆಡುವ ಕಾರ್ಯಕ್ರಮ

ಮಾನ್ವಿಯ ಸ್ಥಳೀಯ ಸಂಸ್ಥೆಯವರು ಅಲ್ಲಿನ ಸಾಮಾಜಿಕ ಅರಣ್ಯವಲಯ ಇಲಾಖೆಯ ಆಶ್ರಯದಲ್ಲಿ ಸೆಪ್ಟೆಂಬರ್ ೧೯ ರಂದು ಸಸಿ ನೆಡುವ ಕಾರ್ಯಕ್ರಮ ಏರ್ಪಡಿಸಿದ್ದರು.

ಜಿಲ್ಲಾ ಪರಿಷತ್ ಸದಸ್ಯ ಶ್ರೀ ಬಸವನಗೌಡ ಜಾನೇಕಲ್ಲು ಅವರು ಅಧ್ಯಕ್ಷರಾಗಿದ್ದರೆ, ಶಾಲಾ ಸುಧಾರಕ ಸಮಿತಿ ಅಧ್ಯಕ್ಷ ಶ್ರೀಸಾಂಬಯ್ಯ ಸ್ವಾಮಿ, ಶ್ರೀ ರಾಘವೇದ್ರರಾವ್ ಸಂಪುರ್ತಿಯವರು ಮುಖ್ಯ ಅತಿಥಿಗಳಾಗಿದ್ದರು.

ಮಾನ್ವಿಯ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಡಾ|| ಜಿ. ವಸಂತ ಕುಮಾರ, ಸಹಾಯಕ ಜಿಲ್ಲಾ ಆಯುಕ್ತ (ಸ್ಕಾ) ಮತ್ತು ಸಹಾಯಕ ವಿದ್ಯಾಧಿಕಾರಿ ಶ್ರೀ ಜಿ. ವಿರುಪಣ್ಣ, ಸಾಮಾಜಿಕ ಅರಣ್ಯ ವಲಯ ಅಧಿಕಾರಿ ಶ್ರೀ ಬಿ. ಜಿ. ತಂಬ್ರಳ್ಳಿ ಅವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬೆಳ್ತಂಗಡಿಯಲ್ಲಿ ಗಾಂಧೀ ಜಯಂತಿ ಹಾಗೂ ಶಾಂತಿ ಮತ್ತು ರಾಷ್ಟ್ರೀಯ ಭಾವೈಕ್ಯತೆ

ಬೆಳ್ತಂಗಡಿಯ ಭಾರತ ಸ್ಕೌಟ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯವರು ಅಕ್ಟೋಬರ್ ೨ ರಂದು ಗಾಂಧೀ ಜಯಂತಿ ಹಾಗೂ ಶಾಂತಿ ಮತ್ತು ರಾಷ್ಟ್ರೀಯ ಭಾವೈಕ್ಯತೆ ಬಗ್ಗೆ ಪ್ರಚಾರ ಹಾಗೂ ತಿಳುವಳಿಕೆ ನೀಡಿದರು.

ಬೆಳಿಗ್ಗೆ ಬುಲ್ ಬುಲ್, ಕಬ್, ಸ್ಕೌಟ್ ಮತ್ತು ಗೈಡ್ ಸದಸ್ಯರು ಇತರ ವಿದ್ಯಾರ್ಥಿಗಳ ಜೊತೆ ಸೇರಿ ಶಾಂತಿ ಮತ್ತು ರಾಷ್ಟ್ರೀಯ ಭಾವೈಕ್ಯತೆಯ ಘೋಷಣೆಗಳೊಂದಿಗೆ ಮೆರವಣಿಗೆ ಮಾಡಿದರು.

ಮಂಡ್ಯದಲ್ಲಿ ಪೆಟ್ರೋಲ್ ನಾಯಕರ ತರಬೇತಿ ಶಿಬಿರ

ಮಂಡ್ಯ ತಾಲ್ಲೂಕು ಮಟ್ಟದ ಪೆಟ್ರೋಲ್ ನಾಯಕರ ತರಬೇತಿ ಶಿಬಿರವು ಕಳೆದ ಸೆಪ್ಟೆಂಬರ್ ೧೬ ರಿಂದ ೧೯ ರವರೆಗೆ ಕೀಲಾರದಲ್ಲಿ ನಡೆದು, ವಿವಿಧ ಶಾಲೆಗಳ ಪೆಟ್ರೋಲ್ ನಾಯಕರು, ಉಪನಾಯಕರು ಸೇರಿದಂತೆ ೧೦೦ ಸ್ಕೌಟ್ಸ್ ಮತ್ತು ಗೈಡ್ಸ್ ಭಾಗವಹಿಸಿದ್ದರು.

ಉದ್ಘಾಟನೆ

ಮಂಡ್ಯ ಜಿಲ್ಲಾ ಪರಿಷತ್ ಉಪಾಧ್ಯಕ್ಷ ಶ್ರೀ ಶಿವಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ, ಕೀಲಾರ ಮಂಡಲ ಪಂಚಾಯಿತಿಯ ಪ್ರಧಾನ ಶ್ರೀ ಹೆಚ್. ಬಿ. ಮಂಚೇ ಗೌಡರು ಸೆ. ೧೬ ರಂದು ಸಂಜೆ ಉದ್ಘಾಟಿಸಿದರು. ಎಂ. ವಿ. ಎಂ. ಪ್ರೌಢಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಶ್ರೀ ಕೆ. ಸಿ. ಪುಟ್ಟಸ್ವಾಮಿ, ಮಾಜಿ ಕಾರ್ಯ ದರ್ಶಿ ಶ್ರೀ ಕೆ. ಎಂ. ಕೆಂಪಯ್ಯ, ಮುಖ್ಯೋಪಾಧ್ಯಾಯ ಶ್ರೀ ಶ್ರೀನಿವಾಸ ಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿ ದ್ದರು.

ಶಿಬಿರದ ನಾಯಕ ಸ್ಯಾಮುಯೆಲ್ ಸತ್ಯಕುಮಾರ್ ಸ್ವಾಗತಿಸಿದರೆ, ಶ್ರೀ ರಾಮಲಿಂಗಯ್ಯ ವಂದನಾರ್ಪಣೆ ಮಾಡಿದರು.

ಶಿಬಿರದಲ್ಲಿ ತರಬೇತಿ ಪಡೆಯುವುದರ ಜೊತೆಗೆ ಸ್ಕೌಟ್ ಮತ್ತು ಗೈಡ್‌ಗಳು ಶ್ರಮದಾನದಲ್ಲೂ ಭಾಗ ವಹಿಸಿದರು. ಶಿಬಿರಾಗ್ನಿಯಲ್ಲಿ ನಾಗರೀಕರೂ ಭಾಗವಹಿಸಿ ದ್ದರು.

ಸಮಾರೋಪ

ಜಿಲ್ಲಾ ರೋಟರಿ ಸಂಸ್ಥೆಯ ಅಧ್ಯಕ್ಷ ಶ್ರೀ ನಾಗರಾಜಪ್ಪ ನವರ ಅಧ್ಯಕ್ಷತೆಯಲ್ಲಿ ಸೆ. ೧೯ ರ ಸಂಜೆ ನಡೆದ ಸಮಾ ರೋಪ ಸಮಾರಂಭದ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಯುಕ್ತ (ಸ್ಕೌ) ಎಂ. ಆರ್. ಸಂಪತ್ ಕುಮಾರ್ ಅವರು ಸಮಾ ರೋಪ ಭಾಷಣ ಮಾಡಿ, ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಣೆ ಮಾಡಿದರು.

ಕಾರ್ಯದರ್ಶಿ ಕೆ. ನಾಗರಾಜು ಅವರು ಸ್ವಾಗತಿಸಿದರೆ, ಸ್ಯಾಮುಯೆಲ್ ಸತ್ಯಕುಮಾರ್ ಶಿಬಿರದ ವರದಿ ಮಂಡಿ ಸಿದರು. ಶ್ರೀ ರಾಮಲಿಂಗಯ್ಯ ಅವರ ವಂದನಾರ್ಪಣೆಯ ನಂತರ ಸ್ಕೌಟ್ ಮತ್ತು ಗೈಡ್‌ಗಳಿಂದ ಮನೋರಂಜನಾ ಕಾರ್ಯಕ್ರಮ ನಡೆಯಿತು.

ಉತ್ತಮ ಶಿಕ್ಷಕರಿಗೆ ಸನ್ಮಾನ

ಮಂಡ್ಯ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಮಿತಿಯ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಡಾ|| ಎಸ್. ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಮತ್ತು ಶಿಕ್ಷಕರ ದಿನ, ಅಂದರೆ ಸೆ. ೫ ರಂದು ಬಸರಾಳು ಸರ್ಕಾರಿ ಕಿರಿಯ ಕಾಲೇಜಿನ ಉಪನ್ಯಾಸಕ, ಸ್ಕೌಟ್ ಮಾಸ್ಟರ್ ಶ್ರೀ ಕೆ. ನಾಗರಾಜು ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಪರಿಷತ್ ಅಧ್ಯಕ್ಷ ಶ್ರೀ ಕೆ. ಸಿಂಗಾರಿ ಗೌಡ ಅವರು ವಹಿಸಿದ್ದರೆ, ಮುಖ್ಯ ಅತಿಥಿಗಳಾಗಿದ್ದ ಮಂಡ್ಯದ ಶಾಸಕ ಶ್ರೀ ಎಸ್. ಡಿ. ಜಯರಾಂ ಸನ್ಮಾನಿತರಿಗೆ ಶಾಲು ಹೊದಿಸಿ, ಫಲತಾಂಬೂಲಗಳನ್ನಿತ್ತರು.

ಕೆರಗೋಡು ಶಾಸಕ ಶ್ರೀ ಹೆಚ್. ಡಿ. ಚೌಡಯ್ಯ, ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಶ್ರೀ ಸಂಪಂಗಿ, ಶಿಕ್ಷಣಾಧಿಕಾರಿ ಶ್ರೀ ಕೆಂಪೇಗೌಡ ಮೊದಲಾದ ಗಣ್ಯರು ಭಾಗವಹಿಸಿದ್ದರು.

ವಿಷಯ ಪರೀಕ್ಷಕ ಶ್ರೀ ನರಸಿಂಹ ಐಯ್ಯಂಗಾರ್ ಅವರು ಸನ್ಮಾನಿತರ ಪರಿಚಯ ಮಾಡಿಕೊಟ್ಟರು.

ವುಡ್ ಬ್ಯಾಡ್ಜ್ ಪದಕ ಗಳಿಸಿದವರು

ಕೀಲಾರದ ಸ್ಕೌಟ್ ಮಾಸ್ಟರ್ ಸ್ಯಾಮುಯೆಲ್ ಸತ್ಯಕುಮಾರ್ ಮತ್ತು ಬಾಮಲಾಪುರದ ಸ್ಕೌಟ್ ಮಾಸ್ಟರ್ ಹೆಚ್. ಡಿ. ಶಿವರಾಮೇ ಗೌಡ ಅವರು ವುಡ್ ಬ್ಯಾಡ್ಜ್ ಪದಕಗಳಿಸಿದ್ದಾರೆ.

ಅಪಘಾತಗಳಿಂದ ನಿಮ್ಮ ಮಗುವನ್ನು ರಕ್ಷಿಸಿ

ನಿಮ್ಮ ಮಗು ಒಲೆ, ಸ್ಟೌವ್, ಬೆಂಕಿ
ಇತ್ಯಾದಿ ಬಳಿ ಆಡಲು ಬಿಡಬೇಡಿ.

ಸೀಮೆ ಎಣ್ಣೆ, ವಿದ್ಯುತ್ ಉಪಕರಣಗಳು
ಹಾಗೂ ಹರಿತವಾದ ವಸ್ತುಗಳನ್ನು
ನಿಮ್ಮ ಮಗುವಿಗೆ ಸಿಗದಂತೆ ಇಡಿ.

ಮಗುವಿನ ಆಟದ ಸಾಮಾನುಗಳ
ತುದಿ ಮೊನಚಾಗಿರಬಾರದು.

ನಿಮ್ಮ ಮಗುವಿನ ಉಡುಪಿನಲ್ಲಿ ಸೂಜಿ,
ಪಿನ್ನು ಇತ್ಯಾದಿಗಳನ್ನು ಬಳಸಬೇಡಿ.

ಹೆಚ್ಚಿನ ವಿವರಗಳಿಗೆ : ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರ್ಕಾರ, ಬೆಂಗಳೂರು
ಇವರನ್ನು ಸಂಪರ್ಕಿಸಿರಿ.

'ಕರ್ನಾಟಕ ವಾರ್ತೆ'

U. N. O. Honours Scouting

Scout/Guide movement is a worldwide movement. This movement, true to its spirit of international brotherhood, is spreadover 150 countries and territories around the world. This reflects the useful ness of this movement as an effective instrument of training young people to face the future with confidence.

The Bharat Scouts & Guides, established in 1950 as a result of the merger of erst-while there organisations, is the fourth largest organisation in the world with 16 lakh scouts and guides in India. The organisation functions as a non-official body harnessing the adventurous spirit of the young people in the service of mankind transcending all barriers of caste, colour and creed. As a voluntary and non-governmental organisation, it is fully committed to imparting value-based education with emphasis on community service. It has been instrumental in involving children in national priorities like family life education adult education, sanitation promotion and leprosy control. The International Leprosy Association Munich has appreciated the efforts made by the Bharat Scouts & Guides in educating people about the real facts of disease in order to dispel the myth and the conception that leprosy is an incurable disease.

The Bharat Scouts & Guides is affiliated to the world Bureau of Scouts and the World Association of Girl Guides and Girl Scouts. It is collaborating with the UNICEF in the Sanitation Programme, and with Family Planning Association to promote family life education.

Being manifestedly a service-oriented organisation, it has also been undertaking programmes and projects according to the local needs. It organised a Peace March at Chandigarh recently to inculcate the spirit of national unity and brotherhood among the people of all faiths.

The United Nation awarded IYY Plaque to the Bharat Scouts & Guides during the International Year of Youth in recognition of the services rendered by it in the sphere of youth activities. The organisation lays emphasis on the spirit of self-help and self-reliance and as such mobilises its own resources for carrying out its activities apart from the grant received by it from the Ministry of Youth Affairs. Every child gives a rupee a year as individual registration fee. This truely non-governmental character of the movement has won wide recognition and support from all quarters.

In recognition of its significant contribution to the programme and objectives of the International Year of Peace proclaimed by the United Nations General Assembly, the Bharat Scouts & Guides was chosen among NGOs of 169 countries for the prestigious eward of the PEACE MESSENGER which was handed-over to Sardar Lakshman Singh, National Commissioner of ths Bhart Scouts & Guides on 15th of September, 1987-The International Peace Day-at a Special ceremony held at the United Nations Headquarters.

For us, it is, indeed, a unique International honour. This award has added a new laurel to the name of the Bharat Scouts & Guides which it rightly deserved for disseminating peace education to make the people realise that the growing threat of a nuclear catastrophe must be averted and the mankind must live in peace.

The Court of Honour

Have you ever been stopped in a shopping mail by an interviewer, or received an opinion questionnaire in the mail? Canadians are constantly being surveyed about something or other. The results are tabulated and used for various purposes by government, industry and educational institutions.

In the 80s, one of the most significant surveys was conducted of young people and reported in the Emerging Generation by Reginald Bibby and Donald Posterski Irwin Publishing, Toronto. The book contains a wealth of information about young people's values and hope for the future. One of the survey's important findings concerns adolescent perception of adults, their feeling that adults want to control them and will not allow them to move towards adulthood as unique individuals. A significant statistic also came out of the study over 90% of the young people surveyed said that friendseip was the value of most importance to them.

What does all this have to do with the Court of Honour. It seems to me that in the troop, the Court of Honour provides the perfect vehicle for responding to these two findings. First it allows young people to try on adult roles, Second the Scouts active participation in decision-making about troop activities can lead to close and lasting friendships. This happens when the group seeks out and seriously considers every member's contribution before reaching an agreement.

Who makes up the Court of Honour? In some troops representation is designated to patrol leaders and assistant patrol leaders. In others, the responsibility is shared across patrol membership. Each style has its particular strengths and weaknesses but, in both cases, it's important for leaders to try to follow B-P's suggestion that we "give boys real responsibility".

Often, the troop Scouter is the only adult involved, although troop counsellors

may also be invited particularly when the Court of Honour is planning programmes. The Troop Scouter acts in an advisory capacity, but has the power of veto if the Scouts suggest plans or actions that are not compatible with Scouting's aims and principles. Sometimes, the Court of Honour becomes the troop Scouter's patrol which gives the Scouter a further opportunity to help develop the Scouts leadership skills.

What does a Court of Honour do? B. P. had a clear idea of its role. It was to decide rewards, punishments, progrmme of work, camps, and other questions affecting troop management. He felt it important to pledge the members of the Court of Honour to secrecy and have them make public only the decisions that affected the whole troop. In our troops today, the Court of Honour has three basic areas of responsibility, planning troop activities, general administration, and guarding the honour of the troop. All of these responsibilities support the individual patrol and its members.

The Court of Honour seems to operate best when meetings are kept short but held frequently. The more often the Scouts meet the higher their commitment to their plans will be frequent meetings also enable them to take greater responsibility for the month-to-month operation of the troop.

When Scouts learn from their involvement in various leadership roles, there are a number of other bonuses. The patrol system is evident and the Court of Honour manages the troop's affairs. Scouts experience a sense of freedom that addresses the issue of adult control raised in The Emerging Generation. The precess of working together to reach mutually beneficial decisions also helps them meet their overwhelming need for friendship. And troop membership is maintained.

The Court of Honour, a good ideal.

By. Robb Baker
Sent in by Sri K. Kasinath

THE BRIDGE BUILDER

An old man going along the highway,
Came at the evening cold and grey,
To a chasm vast and deep and wide.

The old man crossed in the twilight dim,
The sullen stream had no fear for him.
But he turned when safe on the other side,
And built a bridge to span the tide.

"Old man" said a fellow pilgrim near,
"you are wasting your strength with
building here.
You never again will pass this way,
You've crossed the chasm deep and wide,
Why build this bridge at evening tide ?"

The builder lifted his old grey head,
"Good Friend, in the path I have come,"
he said,
"There follows after me today,
A youth whose feet must pass this way.
This chasm that has been nought to me,
To that fair-haired lad may a patfall be."

"He too must Cross in the twilight dim,
Good Friend, I am building this bridge for
him".

With Courtesy of "SCOUTING MAGAZINE"
July 1987

Himalaya Wood Badge Holders Meet

Himalaya Wood Badge holders' meet, Karnataka, was held at Besant Park, Doddaballapur on 13th and 14th October 1987.

Registration of members and grouping was done at 3 p.m. on 13th.

Smt. Leeladevi R. Prasad, State Commissioner (G) and M.L.A., inaugurated the meet at 4-30 p. m. with an impressive inaugural speech, she expressed that the participants should strengthen the organisation and wished that Guides should be more active in H.W.B.H.

The Scribe A.P. Nagesha Rao welcomed the gathering and all the participants gave their self introduction.

The Wood Badge holders were given a number of new games divised by the members under the leadership of Sri G. S. Chandra Prakash. The S.O.C. (S) S. Audikesavalu declared open the Camp Fire. Though the items were limited, they were novel, unique and a symbol of oneness.

On 14th, Flag was hoisted at 7-30 a.m. Discussions were held on the fallowing topics ;

i) How to achieve the purpose of Scouting ? Have we achieved, if not what shall we do to achieve it ?

ii) What is new Boy/Girl Programme ? How can we implement in the units ?

iii) How to improve the standards of a Scout through new Boy/Girl programme ?

iv) Open Session on improvement of H.W.B.H. Meet-what is done and what can be done ?

The business meeting was held at 3-00 p.m. The Scribe A. P. Nagesha Rao read the report for the year 1986-87. After five resolutions were passed, the Scribe gave vote of thanks.

Sri V. P. Deenadayalu Naidu, Stata Chief Commissioner delivered the inspiring validictory address at 4-00 p.m. Major M. R. Narayan Singh, State Commissioner (S) was in the chair.

Sri Anthony Cruz welcomed the gathering. The validictory address was fallowed by the chairman's Yarn.

After vote of thanks by the Scribe, the Meet was cloesd with Flag Down Cermony.

Workshop for Rovers/Rangers on Peace and Integration.

A State level Workshop for Rovers and Rangers on Peace and Integration was held at Besant Park, Dodballapur from 26th October 1987 to 1st November 1987. 45 Rovers and 22 Rangers drawn from Chikmagalur, Chitradurga, North Kanara, Shimoga, South Kanara, Bangalore South, Mysore, Kolar North, Tumkur, and Bijapur participated in the Workshop.

Sri B. V. Rajaram, Faculty member of Bangalore University, Department of Drama and Dance, with his team were the faculty members who conducted the work shop. The Rovers/Rangers were given stage training and Mime acting and other stage requisite subjects during the work shop. This is the first time that this kind of workshop is organised for Rovers and Rangers and all the members took very keen interest to learn these techniques. At the end, the Rovers and Rangers enacted the play depicting Peace and Integration.

Sri M. Halagappa, Leader Trainer,/was assisted by Sri C. H. Channabasaiah, ASOC (S) Hassan. Sri Madhav Singh, ASOC (S) was the Quarter Master.

Inauguration of Administrative Block & Sri Kondajji Basappa Memorial Rally on 14th November 1987 at Kondajji Campus

PROGRAMME

"ALL FAITH PRAYER"

at 8-00 a.m. On Saturday, the 14th November 1987

Blessings :

His Holiness Sri Taralabalu Jagadguru
Dr. SHIVAMURTHY SHIVACHARYA MAHASWAMIJI
Sri Taralabalu Jagadguru Brihanmath
SIRIGERE, CHITRADURGA TALUK

Inauguration of

SRI SHAMANUR KALLAPPA SAVITRAMMA ADMINISTRATIVE BLOCK

at 5 p.m. on Saturday, the 14th November 1987

Inauguration	:	Sri B. L. SHANKAR Hon'ble Minister of State for Youth Services & Sports, Govt. of Karnataka
Unveiling the Portraits	:	Sri G. S. BAGALKOT Hon'ble Minister of State for Forests Govt. of Karnataka
Guests of Honour	:	Sri S. S. BAKKESH, President Zilla Parishad, Chitradurga
		Sri K. G. MAHESWARAPPA, M.P.
		Sri B. G. KOTRAPPA, MLA
		Sri K. M. KOTI, Member, Karnataka Public Service Commission
		Sri D. VENKATESHWARA RAO, Deputy Commissioner, Chitradurga
		Sri S. SHIVASHANKARAPPA, Hon. Secretary, Bapuji Educational Association, Davangere.
President	:	Sri H. EKANTAIAH, Hon'ble Minister for Co-operation Government of Karnataka.

Valedictory of

SRI KONDAJJI BASAPPA MEMORIAL INTER-DISTRICT RALLY OF SCOUTS & GUIDES OF CHITRADURGA & DAVANGERE DISTRICTS

AND

SEMINAR ON PEACE AND INTEGRATION

at 5-15 p.m. on Saturday, the 14th November 1987

Valedictory Speech	:	Sri G. S. BAGALKOT Hon'ble Minister of State for Forests Government of Karnataka.
President	:	Sri H. EKANTAIAH Hon'ble Minister for Co-operation Government of Karnataka.

K. B. Shanmukhappa
State Secretary

Major T. K. Nagambal
Joint State Secretary

V. P. Deenadayalu Naidu
State Chief Commissioner

Major M. R. Narayan Singh
Leeladevi R. Prasad, MLA
State Commissioners

Regd. No. B. G. W. 11

State level Commissioners' Training Course

A State level Commissioners' Training course was held at Besant Park, Doddaballapur from 27th Oct. 1987 to 1st Nov. 1987. 25 candidates drawn from Bangalore North, Bangalore Rural, Belgaum, Mysore Rural, Hassan, Raichur, Shimoga North Kanara, Chikmagalur, Mangalore University, Bangalore University and Chitradurga participated in the course.

The course was inaugurated by Sri V. P. Deenadayalu Naidu, State Chief Commissioner, and Chief Commissioner (Scouts) Bharat Scouts and Guides, India on 27th October 1987. Major M.R. Narayan Singh, State Commissioner (S) Presided. The course offered participants an insight to the duties and responsibilities as Commissioners in the role of Management of District and Local Associations, Financial management, planning for the expansion and development of the Movement in the District etc.

The participants evinced very keen interest to know about the organisation. The batch consisted of Educationists, Advocates, Doctors and social workers.

The Valedictory of the course was held on 31st October 1987. Sri S. N. Borkar, IPS, Director of Youth Services & Sports, was the Chief Guest. In his valedictory address, he recalled his involvement as a Scout and assured that he would help do his best to render all assistance to the organisation during his tenure of office. Sri N. Nagaraj, Joint Director, Directorate of Youth Services & Sports also addressed the participants. Sri V. P. Deenadayalu Naidu, State Chief Commissioner, presided.

Sri S. Audikesavalu, State Org. Commissioner (S) was the leader of the course, ably assisted by Sriyuths A. P. Nagesha Rao, M. Halagappa, K. S. Shankar and Smts. N. H. Kamalakshamma, SOC (G), Mythily Sampath, S. V. Janaki and P. Saroja. Sri Madhav Singh, was the quartermaster for the course.

Published by Sri K. B. Shanmukhappa, State Secretary, Bharat Scouts and Guides, Karnataka State Headquarters, Kondajji Basappa Road, Fort, Bangalore- ... nted by Sri B. Basavaiah Managing Director at S. J. M. Mudrana Pvt. Ltd., Sampangi ... lore-560 027 Phone-226469



Book-Post

To

Smt. Usha Ramaiah
No. 124, 42nd cross,
8th Block, Jayanagar,
Bangalore-560082



BHARAT SCOUTS & GUIDES
Kondajji Basappa Road
Prof. P. Sivashankar Circle
Fort, Bangalore-560 002